15	Second Division Asst	55	46	11
16	Typist	7	2	5
17	Jr H.A.(M)	192	180	12
18	Jr.H.A.(F)	287	287	-
19	Driver	45	35	10
20	Stenographer	2	1	1
21	Jr.Tech Asst	1	-	1
22	Electrician	1	-	1
23	Ref.Mechanic	1	-	1
24	S.T.M	1	1	-
25	Sr.Pharmacist	10	4	6
26	Pharmacist	59	52	7
27	Opthalmic Asst	13	11	2
28	Jr.N.M.S	3	3	-
29	X-Ray Tech	8	7	1
30	B.H.E.O	16	12	4
31	Group :D.	363	250	113

133 ಶ್ರೀ ಹ್ಯಾರಿಸ್ ಎನ್. ಎ
ಕಾರ್ಮಿಕ ಸಚಿವರು

ಅ) ಕಾರ್ಮಿಕ ಕುಟುಂಬಗಳ ಶೈಕ್ಷಣಿಕ ಅಭಿವೃದ್ಧಿಗಾಗಿ ಇಲಾಖೆಯವರು ಜಾರಿಗೊಳಿಸುತ್ತಿರುವ ಕಾರ್ಯಕ್ರಮಗಳ ವಿವರಗಳು ಯಾವುವು;

ವಿದ್ಯಾರ್ಥಿ ವೇತನ ಪಾವತಿ ಅಡಿಯಲ್ಲಿ ಕಾರ್ಮಿಕರ ಮಕ್ಕಳಿಗೆ ಕಾರ್ಮಿಕ ಕಲ್ಯಾಣ ಮಂಡಳಿಯಿಂದ ವಿದ್ಯಾರ್ಥಿವೇತನ ನೀಡಲಾಗುತ್ತಿದೆ.

ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ (ಉದ್ಯೋಗ ಕ್ರಮೀಕರಣ ಮತ್ತು ಸೇವಾ ಷರತ್ತುಗಳು) ಕಾಯಿದೆ, 1996 ಮತ್ತು ಕರ್ನಾಟಕ ನಿಯಮಗಳು, 2006 ಇದರ ಅಡಿಯಲ್ಲಿ ದಿನಾಂಕ:18.01.2007ರಂದು ಸ್ಥಾಪನೆಗೊಂಡಿರುವ ಕಟ್ಟಡ ಮತ್ತು ಇತರೇ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯ ವತಿಯಿಂದ ನೋಂದಾಯಿತ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಈ ಕೆಳಕಂಡ ಧನ ಸಹಾಯವನ್ನು ವಿತರಿಸಲಾಗುತ್ತಿದೆ.

1) ಎಸ್.ಎಸ್.ಎಲ್.ಸಿ. ಪಾಸಾದವರಿಗೆ ರೂ.750/-
2) ಪಿ.ಯು.ಸಿ. ಪಾಸಾದವರಿಗೆ. 1,000/-

3) ಐ.ಟಿ.ಐ/ಡಿಪ್ಲೋಮಾ ಓದುತ್ತಿರುವವರಿಗೆ ರೂ.2,000/-
4) ಪದವಿ ಓದುತ್ತಿರುವವರಿಗೆ ರೂ.1,500/-
5) ವೃತ್ತಿಪರ ಶಿಕ್ಷಣ ಓದುತ್ತಿರುವವರಿಗೆ ರೂ.5,000/-

ಆ) ಬಡ ಕಾರ್ಮಿಕ ಕುಟುಂಬಗಳ ಮಕ್ಕಳಿಗೆ ಶೈಕ್ಷಣಿಕ ಮೀಸಲಾತಿ, ಪ್ರೋತ್ಸಾಹ ಧನ (ಸ್ಕಾಲರ್‌ಶಿಪ್) ನೀಡಿಕೆ, ಕುಶಲ ವೃತ್ತಿ ಶಿಕ್ಷಣ ಮುಂತಾದ ಸೌಲಭ್ಯಗಳನ್ನು ನೀಡಲು ಸರ್ಕಾರ ಕ್ರಮ ಕೈಗೊಂಡಿದೆಯೇ;

ಪ್ರೋತ್ಸಾಹ ಧನ (ಸ್ಕಾಲರ್ ಶಿಪ್) ನೀಡಿಕೆ – ಬಗ್ಗೆ 'ಅ' ಪ್ರಶ್ನೆಯಲ್ಲಿ ಉತ್ತರಿಸಲಾಗಿದೆ.

ಬಡ ಕಾರ್ಮಿಕ ಕುಟುಂಬದ ಮಕ್ಕಳಿಗೆ ಶೈಕ್ಷಣಿಕ ಮೀಸಲಾತಿ ಮತ್ತು ಕುಶಲ ವೃತ್ತಿ ಶಿಕ್ಷಣ ಮುಂತಾದ ಸೌಲಭ್ಯ ನೀಡಲು ಸರ್ಕಾರ ಕ್ರಮ ಕೈಗೊಂಡಿರುವುದಿಲ್ಲ

ಇ) ಹಾಗಿದ್ದಲ್ಲಿ, ವಿವರ ನೀಡುವುದು.

ಮಂಡಳಿಯ ವತಿಯಿಂದ ನೋಂದಾಯಿತ ಕಟ್ಟಡ ಕಾರ್ಮಿಕರ ಮಕ್ಕಳಿಗೆ ಈ ಕೆಳಗಿನಂತೆ ಶೈಕ್ಷಣಿಕ ಧನಸಹಾಯವನ್ನು ನೀಡಲಾಗಿದೆ.

1) 2008–09ನೇ ಸಾಲಿನಲ್ಲಿ ನೋಂದಾಯಿತ ಕಾರ್ಮಿಕರ 32 ಮಕ್ಕಳಿಗೆ ರೂ.61,250/- ಧನಸಹಾಯ ನೀಡಲಾಗಿದೆ.
2) 2009–10ನೇ ಸಾಲಿನಲ್ಲಿ ಇದುವರೆಗೆ ನೋಂದಾಯಿತ ಕಾರ್ಮಿಕರ 13 ಮಕ್ಕಳಿಗೆ ರೂ.28,500/- ಧನಸಹಾಯ ನೀಡಲಾಗಿದೆ.

ಅಲ್ಲದೆ ಕಾರ್ಮಿಕ ಕಲ್ಯಾಣ ಮಂಡಳಿಯ ವತಿಯಿಂದ 2007–08 ಹಾಗೂ 2008–09ನೇ ಸಾಲಿನಲ್ಲಿ ಒಟ್ಟು 1496 ಮಂದಿಗೆ ರೂ.1,261,100.00ಗಳನ್ನು ಹಾಗೂ 2008–09ನೇ ಸಾಲಿನಲ್ಲಿ 4192 ಮಂದಿಗೆ ರೂ.31,96,200.00ಗಳ ವಿದ್ಯಾರ್ಥಿವೇತನವನ್ನು ನೀಡಲಾಗಿದೆ

ಹಜ್ ಯಾತ್ರಿಕರಿಗೆ ಸೌಲಭ್ಯ ನೀಡುವ ಕುರಿತು

134 ಶ್ರೀ ಹ್ಯಾರಿಸ್ ಎನ್. ಎ (ಶಾಂತಿನಗರ) ಎಂ.ಎಲ್.ಎ
ಪ್ರೊ.ಡಾ.ಮುಮ್ತಾಜ್ ಅಲಿ ಖಾನ್, (ಮಾನ್ಯ ಹಜ್, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು.)

ಅ) ರಾಜ್ಯದಲ್ಲಿ ಹಜ್ ಯಾತ್ರಿಕರಿಗೆ ಸರ್ಕಾರ ನೀಡುತ್ತಿರುವ ಸೌಲಭ್ಯಗಳಾವುವು? 2007–08 ಹಾಗೂ 2008–09ನೇ ಸಾಲಿನಲ್ಲಿ ಎಷ್ಟು ಯಾತ್ರಿಕರಿಗೆ ಯಾತ್ರಾ ಸೌಲಭ್ಯಗಳನ್ನು ಒದಗಿಸಿಕೊಡಲಾಗಿದೆ.